ಘಟಕ–1.

# ದೆಹಲಿ ಸುಲ್ತಾನರು.

1. ಕುತಬ್–ಉದ್–ದಿನ್ ಐಬಕ್ ಮತ್ತು ದೆಹಲಿ ಮನೆತನದ ಸ್ಥಾಪನೆ.
2. ಅಲ್ಲಾ–ಉದ್–ದಿನ್ ಖಿಲ್ಜಿ ಮತ್ತು ಆಡಳಿತಾತ್ಮಕ ಸುಧಾರಣೆಗಳು.
3. ಮಹಮದ್–ಬಿನ್–ತುಘಲಕ್ ಮತ್ತು ಆಡಳಿತಾತ್ಮಕ ಪ್ರಯೋಗಗಳು.

## ದೆಹಲಿ ಸುಲ್ತಾನರು : ಕ್ರಿ.ಶ. 1206–1526.

ಕ್ರಿ.ಶ. 7ನೇ ಶತಮಾನದಲ್ಲಿ ಭಾರತವನ್ನು ಪ್ರವೇಶಿಸಿದ ಅರಬ್ಬರು ಮಹಮದ್ ಘೋರಿಯ ಮೂಲಕ ಭಾರತದಲ್ಲಿ ಇಸ್ಲಾಂ ಧರ್ಮ ಮತ್ತು ಅವನ ಸೇವಕ ಕುತುಬ್– ಉದ್– ದಿನ್ ಐಬಕ್‌ನ ಮೂಲಕ ಇಸ್ಲಾಂ ಸಾನಮ್ರಾಜ್ಯವನ್ನು ಸ್ಥಾಪಿಸಲು ಕರಣವಾದರು. ಕ್ರಿ.ಶ. 1206 ರಲ್ಲಿ ಅಧಿಕಾರದ ಗದ್ದುಗೆ ಏರಿದ ' ಐಬಕ್' ದೆಹಲಿ ಸುಲ್ತಾನರ ಮೊದಲ ದೊರೆಯಾಗಿ ಆಳ್ವಿಕೆಯನ್ನಾರಂಬಿಸಿದ. ದೆಹಲಿ ಸುಲ್ತಾನರ ಆಳ್ವಿಕೆಯ ಕಾಲ ಕ್ರಿ.ಶ. 1206 ರಿಂದ 1526ರ ವರೆಗೆ ವಿಸ್ತರಿಸಿದೆ. ಈ ಕಾಲದಲ್ಲಿ ಐದು (5) ಸಂತತಿಗಳು ಆಳ್ವಿಕೆ ನಡೆಸಿದವು. ಈ ಐದು ಸಂತತಿಗಳು ಸುಮಾರು 320 ವರ್ಷಗಳವರೆಗೆ ಅಳ್ವಿಕೆ ನಡೆಸಿದವು.

1. ಗುಲಾಮಿ ಸಂತತಿ : ಕ್ರಿ.ಶ. 1206–1290
2. ಖಿಲ್ಜಿ ಸಂತತಿ : ಕ್ರಿ.ಶ. 1290–1320
3. ತುಘಲಕ್ ಸಂತತಿ : ಕ್ರಿ.ಶ. 1320–1414
4. ಸಯ್ಯದ್ ಸಂತತಿ: ಕ್ರಿ.ಶ. 1414–1451
5. ಲೋದಿ ಸಂತತಿ: ಕ್ರಿ.ಶ. 1451–1526, 1526ರಲ್ಲಿ ತುರ್ಕರ ನಾಯಕ ಬಾಬರನ ಆಕ್ರಮಣದಿಂದ ಈ ಸಂತತಿ ಅವನತಿಯಾಯಿತು.

## ಗುಲಾಮಿ ಸಂತತಿ (ಕ್ರಿ.ಶ. 1206–1290)

ಗುಲಾಮಿ ಸಂತತಿ (ಕ್ರಿ.ಶ 1206–1290ರ ವರೆಗೆ) ಯು ದೆಹಲಿ ಸುಲ್ತಾನರ ಮೊದಲ ಸಂತತಿಯಾಗಿದೆ. ಈ ಸಂತತಿಯ ಸ್ಥಾಪನೆಯ ಗೌರವ ಕುತುಬುದ್ದೀನ್ ಐಬಕ್‌ನಿಗೆ ಸಲ್ಲುತ್ತದೆ. ಈ ಸಂತತಿಗೆ ಭದ್ರಬುನಾದಿಯನ್ನು ಹಾಕಿದ ಶ್ರೇಯಸ್ಸು ಇಲ್ತಮಷನಿಗೆ ಸಲ್ಲುತ್ತದೆ. ಬಲ್ಬನ್ ಸುಲ್ತಾನ್ ಹುದ್ದೆಯ ಅಧಿಕಾರ ಹಾಗು ಪ್ರತಿಷ್ಠೆಯನ್ನು ಹೆಚ್ಚಿಸಿ. ಈ ರಾಜ್ಯಕ್ಕೆ ಸ್ಥಿರತೆಯನ್ನು ಒದಗಿಸಿದ್ದನು. ಅಲ್ಲಾವುದ್ದೀನ್ ಖಿಲ್ಜಿಯ ದಿಗ್ವಿಜಯಗಳಿಂದಾಗಿ ಇದು ಸಾಮ್ರಾಜ್ಯವೊಂದರ ಸ್ಥಾನವನ್ನು ಪಡಿಯಿತು.

## ಕುತ್ಬುದ್ದೀನ್ ಐಬಕ್; ಕ್ರಿ.ಶ. 1206–1210.

ಮಹಮ್ಮದ್ ಘೋರಿಯ ನಿಷ್ಠಾವಂತ ರಾಜ ಪ್ರತಿನಿಧಿಯಾಗಿದ್ದ ಕುತ್ಬುದ್ದೀನ್ ಐಬಕ್ ಕ್ರಿ.ಶ 1206ರಲ್ಲಿ ದೆಹಲಿಯ ಸುಲ್ತಾನನಾದನು. ಇವನು ಘೋರಿಯ ಗುಲಾಮನಾಗಿದ್ದರಿಂದ ಇವನಿಂದ ಸ್ಥಾಪಿತವಾದ ರಾಜವಂಶಕ್ಕೆ ಗುಲಾಮಿ ಸಂತತಿ ಎಂದು ಕರೆಯಲಾದೆ. ಐಬಕ್‌ನಿಂದ ಪ್ರಾರಂಭವಾದ ಗುಲಾಮಿ ಸಂತತಿಯು ಕ್ರಿ.ಶ 1206 ರಿಂದ 1290ರವರೆಗೆ ಆಳ್ವಿಕೆ ನಡೆಸಿತು. ಆ ಮೂಲಕ ಭಾರತದಲ್ಲಿ ಮುಸ್ಲಿಂ ಸಾಮ್ರಾಜ್ಯದ ಸ್ಥಾಪನೆಮಾಡಿದ ಕೀರ್ತಿಗೆ ಪಾತ್ರನಾದವನು ಕುತುಬುದ್ದೀನ್ ಐಬಕ್. ನಿಶಾಪುರದಲ್ಲಿ ಖಾಜಿಯ ಗುಲಾಮನಾಗಿದ್ದ ಇವನು ತದನಂತರ ಘೋರಿಮಹಮದನ ಗುಲಾಮನಾದನು. ನಿಶಾಪುರದ ಖಾಜಿಯ ಬಳಿಯಲ್ಲಿ ಸೈನಿಕ ತರಬೇತಿ ಹಾಗೂ ವಿದ್ಯಾಭ್ಯಾಸವನ್ನು ಪಡೆದುಕೊಂಡನು. ಇವನಲ್ಲಿದ್ದ ನಿಷ್ಠಾವಂತ ಸೇವೆಯಗುಣ, ಧೈರ್ಯ ಹಾಗೂ ಶೌರ್ಯಗಳು ಘೋರಿ ಮೊಹಮದ್‌ನಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಲು ಸಹಾಯಕವಾದವು. ಅಂದರೆ ಮೊದಲು ಘೋರಿ ಮಹಮದ್‌ನ ಸೇನಾದಳವೊಂದರಲ್ಲಿ ಮುಖ್ಯಸ್ಥನಾಗಿ ನೇಮಕವಾದನು. ಅಶ್ವಶಾಲೆಯ ಅಧಿಕಾರಿಯಾಗಿ "ಅಮೀರ್ ಅಕ್ಬೂರ್" ಎಂಬುದಾಗಿ ನೇಮಿಸಲ್ಪಟ್ಟನು. ಕ್ರಿ.ಶ. 1192ರ 2ನೇ ತರೈನ್ ಕದನದ ನಂತರ ಭಾರತೀಯ ದಂಡಯಾತ್ರೆಗಳ ಸಂಚಾಲನಕನಾಗಿ ಮತ್ತು ಗೆದ್ದ ಭಾರತೀಯ ಪ್ರದೇಶಗಳ ಮೇಲ್ವಿಚಾರಕನಾಗಿ ನೇಮಕವಾದನು. ದೇಹಲಿಯನ್ನು ತನ್ನ ಕೇಂದ್ರ ಸ್ಥಾನವನ್ನಾಗಿಸಿಕೊಂಡು ಹಲವಾರು

ಪ್ರದೇಶಗಳನ್ನು ಗೆದ್ದುಕೊಂಡನು. ಕ್ರಿ.ಶ. 1194ರಲ್ಲಿ ಕನೋಜ್‌ನ ಜಯಚಂದ್ರನ ವಿರುದ್ಧದ ಹೋರಾಟದಲ್ಲಿ ಯಶಸ್ವಿಯಾದನು. ಕ್ರಿ.ಶ. 1195ರಲ್ಲಿ ಕೋಯಿಲ್ (ಅಲಿಗಡ) ಮತ್ತು ರಣತಂಬೂರ್ ಕೋಟೆಗಳನ್ನು, ಕ್ರಿ.ಶ. 1196ರಲ್ಲಿ ಗುಜರಾತ್‌ನ ಅನಿಲ್‌ವಾಡವನ್ನು, ಕ್ರಿ.ಶ. 1197ರಲ್ಲಿ ಬದೌನ್ ನಗರವನ್ನು, ಕ್ರಿ.ಶ. 1202ರಲ್ಲಿ ಬುಂದೇಲ್‌ಖಂಡದ ಚಂದೇಲರನ್ನು ಸೋಲಿಸಿ ಕಾಲಿಂಜರ್‌ನ್ನು ಗೆದ್ದುಕೊಂಡನು. ಕ್ರಿ.ಶ. 1206ರಲ್ಲಿ ಮಹಮದ್ ಘೋರಿಯ ಮರಣದ ನಂತರ ತುರ್ಕಿಯ ಅಮೀರರು ಮತ್ತು ಸೇನಾಧಿಪತಿಗಳು ಐಬಕ್‌ನನ್ನು ದೆಹಲಿಯ ಸುಲ್ತಾನನನ್ನಾಗಿ ನೇಮಿಸಿದರು. ಕ್ರಿ.ಶ. 1206ರಲ್ಲಿ ಘೋರ್‌ನ ದೊರೆ ಮಹಮದ್‌ನು ಐಬಕನಿಗೆ ರಾಜಚಿಹ್ನೆ, ಧ್ವಜ ಮತ್ತು 'ದೆಹಲಿಯ ಸುಲ್ತಾನ' ಎಂಬ ಬಿರುದನ್ನು ನೀಡಿದನು. ಕ್ರಿ.ಶ. 1206ರಲ್ಲಿ ಐಬಕನು ಮಹಮದ್‌ನಿಂದ ದಾಸ್ಯವಿಮೋಚನಾ ಪತ್ರವನ್ನು ಪಡೆದುಕೊಂಡನು. ತನ್ನ ರಾಜ್ಯವನ್ನು ಭದ್ರಪಡಿಸಿಕೊಳ್ಳಲು ತುರ್ಕಿಸ್ಥಾನದ ಮುಖಂಡರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಲು ಮುಂದಾದನು. ಐಬಕ್ ಘಜ್ನಿಯ ದೊರೆ ಯಲ್ದೂಜನ ಮಗಳನ್ನು ವಿವಾಹವಾದನು. ಸಿಂಧ್‌ನ ಕಬಾಚನಿಗೆ ಮತ್ತು ತನ್ನ ಗುಲಾಮನಾದ ಅಲ್ತಮಷನಿಗೆ ತನ್ನಿಬ್ಬರು ಮಕ್ಕಳನ್ನು ಕೊಟ್ಟು ವಿವಾಹ ಮಾಡಿಸಿದನು. ಪಂಜಾಬ್ ಪ್ರಾಂತ್ಯದ ಮೇಲೆ ತನ್ನ ಹಕ್ಕನ್ನು ಮಂಡಿಸಿ ಐಬಕ್‌ನ ಅಳಿಯನಾದ ಕಬಾಚನನ್ನು ಮುಲ್ತಾನ್‌ನಿಂದ ಹೊರಹಾಕಿದ್ದ ತನ್ನ ಮಾವನಿಂದ (ಯಲ್ದೂಜ) ಘಜ್ನಿಯನ್ನು ಗೆದ್ದುಕೊಂಡನಾದರೂ ಅದನ್ನು ಕ್ರಿ.ಶ. 1209ರಲ್ಲಿ ಯಲ್ದೂಜನು ಪುನಃ ವಶಪಡಿಸಿಕೊಂಡನು. ಕ್ರಿ.ಶ. 1210ರಲ್ಲಿ ಪೋಲೋ (ಚೌಗಾನ್) ಆಡುತ್ತಿರುವಾಗ ತನ್ನ ಕುದುರೆಯ ಮೇಲಿಂದ ಕೆಳಗೆ ಬಿದ್ದು ಆಕಸ್ಮಿಕವಾಗಿ ಮರಣಹೊಂದಿದನು. ಸಾಕಷ್ಟು ಧಾನಕಾರ್ಯಗಳಿಗೆ ಪ್ರಸಿದ್ಧನಾಗಿದ್ದ ಐಬಕ್ 'ಲಾಖ್ ಬಕ್ಷ್' ಎಂದು ಕರೆಯಲ್ಪಟ್ಟನು. ದೆಹಲಿಯಲ್ಲಿ "ಕುವತ್–ಉಲ್–ಇಸ್ಲಾಂ" ಎಂಬ ಮಸೀದಿಯನ್ನು ಕಟ್ಟಿಸಿದನು. ಕುತುಬ್ ಮಿನಾರ್‌ನ ನಿರ್ಮಾಣಕ್ಕೆ ಕಾರಣನಾಗಿದ್ದನು. ಅಜ್ಮೀರ್‌ನಲ್ಲಿ ಒಂದು ಮಸೀದಿಯನ್ನು ನಿರ್ಮಿಸಿದ್ದನು.

## ಖಿಲ್ಜಿ ಸಂತತಿ : ಕ್ರಿ.ಶ. 1290–1320.

ಮಧ್ಯಯುಗಿನ ಭಾರತದ ಇತಿಹಾಸದಲ್ಲಿ ಮಹತ್ವ ಪಡೆದ ಚರಿತ್ರಾರ್ಹ ವ್ಯಕ್ತಿಗೆ ಜನ್ಮ ನೀಡಿದ "ಖಿಲ್ಜಿ ಸಂತತಿಯ"ಯ ಬಗ್ಗೆ ಅಧ್ಯಯನ ಮಾಡುವುದು ಇತಿಹಾಸ ಯೋಗ್ಯವಾಗಿದೆ. ಕ್ರಿ.ಶ. 1290 ಜೂನ್ ತಿಂಗಳಿನಲ್ಲಿ ಇಲ್ಬರೀ ತುರ್ಕರ ಸಂತತಿಯ ದೊರೆ ಕೈಕುಬಾದ್‌ನನ್ನು ಪ್ರಬಲ ಸೇನಾ ದಂಡನಾಯಕನಾದ 'ಜಲಾಲುದ್ದೀನ್' ತುರ್ಕೇತರ ಪಂಗಡದವರಾದ ಖಿಲ್ಜಿಗಳೊಂದಿಗೆ ಸೇರಿ ಕೊಲೆ ಮಾಡಿ 'ಜಮುನಾ' ನದಿಗೆ ಕೈಖುಬಾದನ ದೇಹವನ್ನು ಎಸೆದನು. ನಂತರ ಅಧಿಕಾರಕ್ಕೆ ಬಂದ ಸುಲ್ತಾನ್ 'ಕಯೂಮಾರ್'ನನ್ನು ಕೊಂದು 'ಜಲಾಲುದೀನ್ ಫಿರೋಜ್' ಎಂಬ ಬಿರುದಿನೊಂದಿಗೆ ಸಿಂಹಾಸನವೇರಿದನು. ಇವನಿಂದ 'ಗುಲಾಮಿ ಸಂತತಿ' ಮತ್ತು ಭಾರತದಲ್ಲಿ ಟರ್ಕರ ಸಂತತಿ ಅಂತ್ಯವಾಗುವಂತಾಯಿತು. ಅಫ್ಘಾನಿಸ್ತಾನದ ಒಂದು ಚಿಕ್ಕ ಪ್ರದೇಶ 'ಖಿಲ್ಜಿ'ಯಿಂದ ಬಂದವರಾಗಿದ್ದ ಇವರು ವಾಸ್ತವವಾಗಿ 'ತುರ್ಕರೆ' ಆದರೂ ಅಫ್ಘಾನ್ ನಡತೆಗಳನ್ನು ಅಳವಡಿಸಿಕೊಂಡಿದ್ದರಿಂದ ಇವರನ್ನು 'ಖೀಲ್ಜಿ'ಗಳೆಂದು ಕರೆಯಲಾಗಿದೆ. ಗುಲಾಮಿ ಸಂತತಿಯ ಕೊನೆಯ ದೊರೆ ಕೈಕುಬಾದ್‌ನನ್ನು ಕೊಂದು ಅಧಿಕಾರಕ್ಕೆ ಬಂದ 'ಜಲಾಲ್–ಉದ್–ದಿನ್ ಫಿರೋಜ್ ಖಿಲ್ಜಿ (ಕ್ರಿ.ಶ. 1290–1296) ಖಿಲ್ಜಿ ಸಂತತಿಯ ಸ್ಥಾಪಕನಾಗಿದ್ದನು. ಇವನು 70ನೇ ವಯಸ್ಸಿನಲ್ಲಿ ತನ್ನ ಸಹೋದರನ ಮಗನಾದ ಅಲ್ಲಾವುದ್ದೀನ್ ಖಿಲ್ಜಿಯಿಂದ 1296 ಜುಲೈ 20ರಂದು ಕೊಲೆಯಾದನು.

## ಅಲ್ಲಾವುದ್ದೀನ್ ಖಿಲ್ಜಿ : ಕ್ರಿ.ಶ. 1296–1316.

ಖಿಲ್ಜಿ ಸಂತತಿಯಿಂದ ದೆಹಲಿಯನ್ನಾಳಿದ ಪ್ರಖ್ಯಾತ ಸುಲ್ತಾನನಾದ 'ಅಲ್ಲಾವುದ್ದೀನ್ ಖಿಲ್ಜಿ'ಯ ಮೂಲ ಹೆಸರು 'ಅಲಿಗುರ್ಷಸ್ಪ್' ಇವನು ತನ್ನ ಮಾವನಾದ ಜಲಾಲುದೀನ್ ಖಿಲ್ಜಿಯನ್ನು ಕ್ರಿ.ಶ. 1296 ಜುಲೈ 20ರಂದು ಮಾಣಿಕ್ಯಪುರದಲ್ಲಿ ಕೊಲೆ ಮಾಡಿ ಅಂದೇ ಸೈನಿಕ ಬಿಡಾರದಲ್ಲಿ ತನ್ನನ್ನು ಸುಲ್ತಾನನೆಂದು ಘೋಷಿಸಿಕೊಂಡನು. ತನ್ನ ವಿರೋಧಿಗಳಿಗೆ ಬಿರುದು ಮತ್ತು ದೇವಗಿರಿಯ ರಾಮಚಂದ್ರ ದೇವನಿಂದ ದೋಚಿತಂದಿದ್ದ ಸಂಪತ್ತನ್ನು ಹಂಚುವ ಮೂಲಕ ಕ್ರಿ.ಶ. 1296 ಅಕ್ಟೋಬರ್ 22ರಂದು 'ಅಲ್ಲಾವುದ್ದೀನಿಯಾ–ವಾ–ದಿನ್ ಮಹಮ್ಮದ್ ಷಾ ಖಿಲ್ಜಿ' ಎಂಬ ಬಿರುದಿನೊಂದಿಗೆ ಪಟ್ಟಾಭಿಷಿಕ್ತನಾದನು. ಇದಕ್ಕೆ ಜಲಾಲ್–ವುದ್– ದಿನ್ ಖಿಲ್ಜಿಯ ಹೆಂಡತಿ ಮತ್ತು ಮಕ್ಕಳಾದ ಮಲ್ಲಿಕ್‌ಜಹಾನ್, ರುಕ್ನುದೀನ್ ಮತ್ತು ಆಲಿವರ್ದಿಖಾನ್‌ರ ವಿರೋಧವಿತ್ತು.

### ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತ:

### 1.ರಾಜತ್ವದ ಸಿದ್ಧಾಂತ :

ತನ್ನ ಪೂರ್ವಿಕರಿಗಿಂತ ರಾಜತ್ವದ ಬಗ್ಗೆ ಬೇರೆಯದೇ ಪರಿಕಲ್ಪನೆ ಹೊಂದಿದ್ದ ಅಲ್ಲಾವುದ್ದೀನ್ ಖಿಲ್ಜಿ ಸರ್ಕಾರದಲ್ಲಿ ಇಸ್ಲಾಮಿಕ್ ತತ್ವಗಳು ಪ್ರಭಾವ ಬೀರಬಾರದೆಂದು ಮನಗಂಡ ಮೊದಲ ದೆಹಲಿ ಸುಲ್ತಾನನಾಗಿದ್ದಾನೆ. ಇವನು ಪ್ರತಿಪಾದಿಸಿದ ರಾಜತ್ವ ಸಿದ್ಧಾಂತದ ಪ್ರಮುಖ ಅಂಶಗಳೆಂದರೆ, ಆಸ್ಥಾನದಲ್ಲಿ ಉಲೇಮರ ಪ್ರಭಾವವನ್ನು ತಿರಸ್ಕರಿಸಿದನು. ಸುಲ್ತಾನ ದೈವಾಂಶ ಸಂಭೂತ, ಸಾಮಾನ್ಯರಿಗಿಂತ ಜ್ಞಾನಿ ಮತ್ತು ಅನುಭವಶಾಲಿ, ಸುಲ್ತಾನ ಖಲೀಫನ ಪ್ರತಿನಿದಿಯಾಗಿದ್ದು ಖಲೀಫನಿಂದ ರಾಜತ್ವದ ಫರ್ಮಾನನ್ನು ಪಡೆಯಲು ನಿರಾಕರಿಸಿದನು. ಖಾಜಿಗಳು ಮತ್ತು ಮೌಲ್ವಿಗಳು ರಾಜ್ಯಾಡಳಿತದಲ್ಲಿ ಭಾಗವಹಿಸದೆ ಕೇವಲ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿರುವಂತೆ ಸೂಚಿಸಿದನು. ರಾಜ್ಯ ಮತ್ತು ಧರ್ಮವನ್ನು ಪ್ರತ್ಯೇಕಿಸಿ ಆಡಳಿತವನ್ನು ಸಂಘಟಿಸಿದನು.

## 2.ದಂಗೆಗಳು:

ಅಲ್ಲಾವುದ್ದೀನ್‌ನ ಆಡಳಿತಾವಧಿಯಲ್ಲಿ ಅತೃಪ್ತರು ಹಲವಾರು ದಂಗೆಗಳನ್ನು ನಡೆಸಿದರು ಅವುಗಳೆಂದರೆ ಕ್ರಿ.ಶ. 1297ರಲ್ಲಿ ನವಮುಸ್ಲಿಮರು ಗುಜರಾತ್ ಆಕ್ರಮಣದ ನಂತರ ಸಂಪತ್ತಿನ ಹಂಚಿಕೆಯ ವಿಚಾರದಲ್ಲಿ ದಂಗೆಯನ್ನಾರಂಭಿಸಿದರು. ಅಲ್ಲಾವುದ್ದೀನ್‌ನ ಸಹೋದರಿಯ ಮಗ ಅಖತ್‌ಖಾನ್‌ನ ದಂಗೆ. ಅಲ್ಲಾವುದ್ದೀನ್‌ನ ಸಹೋದರಿಯ ಮಕ್ಕಳಾದ ಅಮೀರ್ ಉಮರ್ ಮತ್ತು ಮಂಗೊಖಾನ್‌ರ ದಂಗೆ. ಅಲ್ಲಾವುದ್ದೀನ್‌ನ ಕೊತ್ವಲ ಫಕ್ರುದೀನ್‌ನ ಅಧಿಕಾರಿ 'ಹಾಜಿ ಮೌಲ'ನ ದಂಗೆ ಈ ಮೇಲಿನ ದಂಗೆಗಳೆಲ್ಲವೂ ಅತ್ಯಲ್ಪ ಅವಧಿಯಲ್ಲಿ ಸಂಭವಿಸಿ ವಿಫಲಗೊಂಡವಾದರೂ ಅಲ್ಲಾವುದ್ದೀನ್‌ನನಿಗೆ ತನ್ನ ಆಡಳಿತ ವ್ಯವಸ್ಥೆಯಲ್ಲಿನ ಕೊರತೆಗಳೇ ಕಾರಣವಿರಬಹುದುದೆಂದು ತೀರ್ಮಾನಿಸಲು ಕಾರಣವಾದವು. ಆದ್ದರಿಂದ ಇವನ ಆಪ್ತರು ದಂಗೆಗಳು ನಡೆಯಲು ಪ್ರಮುಖ ನಾಲ್ಕು ಕಾರಣಗಳನ್ನು ಕಂಡುಹಿಡಿದರು ಅವುಗಳೆಂದರೆ

1. ಅಸಮರ್ಪಕ ಗೂಢಾಚಾರ ವ್ಯವಸ್ಥೆ: ರಾಜ್ಯದ ಪರಿಸ್ಥಿತಿಯ ಬಗ್ಗೆ ಸುಲ್ತಾನನಿಗೆ ಸಮರ್ಪಕ ಮಾಹಿತಿ ನೀಡಲು ಸಮರ್ಥವಾದ ಗೂಢಾಚಾರ ವ್ಯವಸ್ಥೆ ಇಲ್ಲದೇ ಇದ್ದಿದ್ದರಿಂದ ಹಲವಾರು ಸುಧಾರಣೆಗಳಿಗೆ ಮುಂದಾದನು. ಗೂಢಾಚಾರ ದಳವನ್ನು ಸ್ಥಾಪಿಸಿ, ಬರೀದರ ಮತ್ತು ಮುನ್ಹಿಗಳೆಂದು ವಿಂಗಡಿಸಿದನು. ಅಂದರೆ ಗೂಢಾಚಾರ ಅಧಿಕಾರಿಗಳು ಮತ್ತು ಗೂಢಾಚಾರರು ಎಂದರ್ಥ. ಶ್ರೀಮಂತರು, ಉನ್ನತ ಅದಿಕಾರಿಗಳ ಮನೆಗಳಲ್ಲಿ, ಮಾರುಕಟ್ಟೆಗಳಲ್ಲಿ, ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿಯೂ ಗೂಢಾಚಾರರನ್ನು ನೇಮಿಸಿದರು. ಕಾನೂನಿನ ಉಲ್ಲಂಘನೆಗೆ ಒಳಗಾದವರಿಗೆ ಉಗ್ರ ಶಿಕ್ಷೆಯನ್ನು ವಿಧಿಸಲಾಯಿತು.

2.ನೊಬೆಲ್ಲರ ಖಾಸಗಿ ಸ್ವತ್ತಿನ ವ್ಯವಸ್ಥೆ: ಅಧಿಕಾರ ಮತ್ತು ವಿರಾಮ ಒದಗಿಸಿ, ಕೆಡುಕು ಮತ್ತು ಘರ್ಷಣೆಗಳ ಬಗ್ಗೆ ಯೋಚಿಸುವಂತೆ ಮಾಡಿ ಅಹಂಕಾರ ಮತ್ತು ಅವಿಧೇಯತೆಯನ್ನು ಉತ್ತೇಜಿಸುವ ಸಮೃದ್ಧ ಹಣ ಹಲವಾರು ದಂಗೆಗಳಿಗೆ ಕಾರಣವಾಗಿದ್ದರಿಂದ ಕೆಲವು ಕ್ರಮಗಳನ್ನು ಕೈಗೊಳ್ಳಲು ಮುಂದಾದನು ಅಂದರೆ ಖಾಸಗಿ ಸ್ವತ್ತಿನ ಪದ್ಧತಿಯನ್ನು ರದ್ದುಮಾಡಿದನು. ನಿವೃತ್ತಿ ವೇತನಗಳು ಮತ್ತು ದತ್ತಿಗಳನ್ನು ರಾಜ್ಯಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಗ್ರಾಮಗಳ ಒಡೆತನದ ಹಕ್ಕು (ಮಿಲ್ಕಾ), ಬಹುಮಾನವಾಗಿ ನೀಡಿದ ಭೂಮಿಯನ್ನು (ಇನಾಂ) ಮತ್ತು ಉದಾರದತ್ತಿಗಳನ್ನು ವಶಪಡಿಸಿಕೊಳ್ಳಲಾಯಿತು. ಹಣವನ್ನು ವಸೂಲಿ ಮಾಡಲು ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದನು.

3. ನೋಬೆಲ್ಲರ ನಡುವಣ ನಡೆಯುವ ಮಧ್ಯಪಾನ ಕೂಟಗಳು: ಮದ್ಯ ಹಾಗೂ ಮಾದಕ ಪದಾರ್ಥಗಳ ಸೇವನೆ, ಮಾರಾಟ ಹಾಗೂ ಜೂಜಾಟಗಳನ್ನು ನಿಷೇಧ ಮಾಡಲಾಯಿತು. ಈ ಆಜ್ಞೆ ಉಲ್ಲಂಘಿಸಿದವರಿಗೆ ಶಿಕ್ಷಿಸಲಾಯಿತು. ಸ್ವತಃ ಸುಲ್ತಾನನೇ ಮದ್ಯ ಸೇವನೆಯನ್ನು ನಿಲ್ಲಿಸಿದನು. ಸಾರ್ವಜನಿಕ ಸ್ಥಳಗಳಗಳಲ್ಲಿ ಮದ್ಯ ಸೇವನೆಯು ಕಟ್ಟುನಿಟ್ಟಾಗಿ ನಿಷೇಧಿಸಲ್ಪಟ್ಟಿತ್ತು.

4. ನೋಬೆಲ್ಲರ ಸಾಮಾಜಿಕ ಕೂಟಗಳು ಮತ್ತು ವೈವಾಹಿಕ ಸಂಬಂಧಗಳು: ಸುಲ್ತಾನನ ಅನುಮತಿ ಇಲ್ಲದೆ ಸಾಮಾಜಿಕ ಕೂಟಗಳನ್ನು ನಡೆಸುವಂತಿರಲಿಲ್ಲ. ಸುಲ್ತಾನನ ಅನುಮತಿ ಇಲ್ಲದೆ ಕುಲೀನರು ಪರಸ್ಪರರಲ್ಲಿ ವೈವಾಹಿಕ ಸಂಬಂದವನ್ನು ನೆರವೇರಿಸುವಂತಿರಲಿಲ್ಲ. ಗೂಡಾಚಾರರ ಭೀತಿಯಿಂದ ಕುಲೀನರು ಸತ್ಕಾರ ಕೂಟಗಳನ್ನು ಮತ್ತು ಬೇಟೆಯಾಡುವಿಕೆಯನ್ನು ಕಟ್ಟುನಿಟ್ಟಾಗಿ ನಿಲ್ಲಿಸಿದ್ದರು.

## 3.ಹಿಂದೂಗಳ ಬಗೆಗಿನ ನೀತಿ :

ಅಲ್ಲಾವುದ್ದೀನ್ ಖಿಲ್ಜಿ ಹಿಂದೂಗಳ ಬಗ್ಗೆ ಅನುಸರಿಸಿದ ನೀತಿಯ ಕುರಿತು ಇತಿಹಾಸಕಾರರಲ್ಲಿ ವಿಭಿನ್ನವಾದ ನಿಲುವುಗಳಿವೆ. ಹಿಂದೂಗಳ ಮೇಲೆ ವಿಧಿಸಿದ ಅಧಿಕ ತೆರೆಗೆಯಿಂದ ಗಮನಿಸಿದರೆ ಹಿಂದೂಗಳ ವಿರೋದಿಯಾಗಿದ್ದನು. ಬರ್ನಿಯು ಹೇಳುವಂತೆ " ಹಿಂದೂಗಳ ಸ್ಥಿತಿ ಸಂತೊಷಕ್ಕೆ ಬಹು ದೂರವಿತ್ತು, ಉತ್ಪಾದನೆಯ ಅರ್ಧದಷ್ಟು ಸರ್ಕಾರಕ್ಕೆ ಸಲ್ಲಿಸಿದರು ಅಧಿಕ ಪ್ರಮಾಣದ

ಹುಲ್ಲುಗಾವಲು ಮತ್ತು ದನಕರುಗಳ ತೆರೆಗೆಯನ್ನು ನೀಡಬೇಕಿತ್ತು". ಎಂದಿದ್ದಾನೆ, ಇವನ ಪ್ರಕಾರ, ಗ್ರಾಮದ ಹಿಂದೂ ಕಂದಾಯ ಅಧಿಕಾರಿಗಳಾದ ಕುತ್‌ಗಳನ್ನು ಮತ್ತು ಮುಖದ್ದಮ್‌ಗಳನ್ನು ವಜಾಮಾಡಿದ್ದರಿಂದ ಇವರ ಜೀವನ ಬಹಳ ನಿಕೃಷ್ಟವಾಗಿತ್ತು. ಇವರ ಪತ್ನಿಯರು ಮುಸ್ಲಿಮರ ಮನೆಗಳಲ್ಲಿ ಸೇವಕಿಯರಾಗಿ ಕಾರ್ಯನಿರ್ವಹಿಸುವಂತಾಯಿತು. ಅಲ್ಲಾವುದ್ದೀನನ ಹಿಂದೂ ವಿರೋಧಿ ನೀತಿಗೆ ಪ್ರಮುಖ ಕಾರಣಾಂಶಗಳೆಂದರೆ. ಖಾಜಿ ಮುಘಿಸುದ್ದೀನನ ಹಿಂದೂ ವಿರೋಧಿ ನೀತಿಯನ್ನು ಒಪ್ಪಿಕೊಂಡಿದ್ದ. ಹಿಂದೂಗಳಲ್ಲಿ ಕೇಂದ್ರೀಕೃತವಾಗಿದ್ದ ಸಂಪತ್ತನ್ನು ದೋಚುವುದು ಅದಕ್ಕಾಗಿ ಹಲವು ಬಗೆಯ ತೆರೆಗೆಗಳನ್ನು ವಿಧಿಸಲಾಗಿತ್ತು. ಜನತೆಯನ್ನು ಬಡತನಕ್ಕೆ ಒಳಪಡಿಸಿ ದಂಗೆ ಏಳದಂತೆ ಮಾಡುವುದಾಗಿತ್ತು.

## 4.ಕಂದಾಯ ಮತ್ತು ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆ :

ಅಲ್ಲಾವುದ್ದೀನ್ ಖಿಲ್ಜಿಯ ಕಂದಾಯ ಮತ್ತು ತೆರಿಗೆ ವ್ಯವಸ್ಥೆಯ ಸುಧಾರಣೆಗಳು ಪ್ರಬಲ ಮತ್ತು ನಿರಂಕುಶರಾಜ್ಯ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ಕೂಡಿದ್ದವು. ಹಿಂದೂಗಳ ದಂಗೆಗಳು ಮತ್ತು ಮಂಗೋಲರ ದಾಳಿಗಳನ್ನು ತಡೆಗಟ್ಟಿ ಈ ಮೂಲಕ ಸಾಮ್ರಾಜ್ಯ ವಿಸ್ತರಿಸಲು ಸೈನ್ಯದ ಅವಶ್ಯಕತೆ ಇದ್ದು ಅದಕ್ಕಾಗಿ ಸಂಪನ್ಮೂಲದ ಅವಶ್ಯಕತೆಯನ್ನು ಪಡೆದುಕೊಳ್ಳಲು ಕಂದಾಯ ಮತ್ತು ತೆರಿಗೆಗಳನ್ನು ಹೆಚ್ಚಿಸಿ ಕೆಲ ಸುಧಾರಣೆಗಳನ್ನು ಕೈಗೊಂಡನು. ಅಂದರೆ ಗ್ರಾಮಗಳ ಒಡೆತನದ ಹಕ್ಕು (ಮಿಲ್ಕ್), ಕಾಣಿಕೆಯಾಗಿ ನೀಡಿದ ಭೂಮಿ (ಇನಾಂ), ಧಾರ್ಮಿಕ ದತ್ತಿಗ (ವಕ್ಫ್) ಗಳನ್ನು ರದ್ದುಪಡಿಸಿ ಮುಟ್ಟುಗೋಲು ಹಾಕಿಕೊಂಡನು. ನಿವೃತ್ತಿ ವೇತನಗಳನ್ನು ನಿಲ್ಲಿಸಿದನು. ರಾಜ್ಯದ ಒಡೆತನದ ಭೂಮಿ (ಖಾಲ್ಸ) ಯನ್ನು ಹೆಚ್ಚಿಸಿ ಉತ್ಪಾದನೆಯಿಂದ ರಾಜ್ಯಾದಾಯವನ್ನು ಹೆಚ್ಚಿಸಿದನು. ವಂಶಪಾರಂಪರ್ಯ ಹಾಗೂ ಖರಾಜ್, ಜಜಿಯಾ (ತಲೆಗಂದಾಯ) ಘಾರಿ (ಮನೆಗಂದಾಯ) ಮತ್ತು ಚರೈ (ಗೋಮಾಳ) ತೆರೆಗೆಗಳಿಂದ ಮುಕ್ತರಾಗಿದ್ದ ಕುತ್, ಚೌದರಿ, ಮತ್ತು ಮುಖದ್ದಮ್ ಎಂಬ ಹಿಂದೂ ಅಧಿಕಾರಿಗಳನ್ನ ವಜಾಗೊಳಿಸಿದನು. ಕುತ್ (ಜಮಿನ್ದಾರ) ಬಲಹಾರ (ಸಾಮಾನ್ಯರೈತ)ರ ನಡುವೆ ವ್ಯತ್ಯಾಸ ವಿಲ್ಲದಂತೆ ಮಾಡಿದನು. ಭೂ ಉತ್ಪಾದನೆಯ ಅರ್ಧದಷ್ಟು ಕಂದಾಯವನ್ನು ವಸೂಲಿ ಮಾಡಲಾಗುತ್ತಿತ್ತು. ಹಣದ ರೂಪಕ್ಕೆ ಬದಲಾಗಿ ದಾನ್ಯದ ರೂಪದಲ್ಲಿ ಕಂದಾಯವನ್ನು ವಸೂಲಿ ಮಾಡುತ್ತಿದ್ದರು. ನೀರಾವರಿ ತೆರಿಗೆ ಮತ್ತು ಅಮದು, ರಫ್ತು ತೆರಿಗೆಗಳು ರಾಜ್ಯಾದ್ಯಂತ ಏಕರೀತಿಯಾಗಿರಲಿಲ್ಲ. ಹಿಂದೂ ವ್ಯಾಪಾರಿಗಳು ಶೇ. 10ರಷ್ಟು ತೆರಿಗೆ ನೀಡಿದರೆ ಮುಸ್ಲಿಂ ವ್ಯಾಪಾರಿಗಳು ಶೇ. 05ರಷ್ಟು ತೆರಿಗೆಯನ್ನು ನೀಡುತ್ತಿದ್ದರು. ಹಿಂದೂಗಳು 'ಜಜಿಯಾ' ಎಂಬ ತಲೆಗಂದಾಯವನ್ನು ಸಲ್ಲಿಸಬೆಕಿತ್ತು. ಅಲ್ಲಾವುದ್ದೀನ್ ಖಿಲ್ಜಿ ಕಂದಾಯ ಆಡಳಿತವನ್ನು ನೋಡಿಕೊಳ್ಳಲು 'ದಿವಾನ್–ಐ–ಮುಸ್ತಖರ್ಜ್' ಎಂಬ ಹೊಸ ಇಲಾಖೆಯನ್ನು ಸ್ಥಾಪಿಸಿದ್ದನು. ಕಂದಾಯಾಡಳಿತವನ್ನು ನೋಡಿಕೊಳ್ಳಲು ಈ ಕೆಳಕಂಡ ಅಧಿಕಾರಿಗಳನ್ನು ನೇಮಿಸಲಾಗಿತ್ತು.

1. ಮುಹಸ್ಸಿಲ್ಸ್ – ವಂತಿಗೆಯನ್ನು ಒತ್ತಾಯಿಸುವವರು.
2. ಅಮೀಲ್ಸ್ – ಕಂದಾಯ ವಸೂಲಿಗಾರರು.
3. ಗುಮಾಸ್ತರು – ಕಾರ್ಯಕಾರಿ ಸಿಬ್ಬಂಧಿ
4. ಮುತಸರ್ರಿಫ್ಸ್ – ಲೆಕ್ಕಾಧಿಕಾರಿಗಳನ್ನು ನೇಮಿಸಲಾಗಿತ್ತು.

ಕಂದಾಯ ಅಧಿಕಾರಿಗಳ ವೇತನ ಅಧಿಕವಿದ್ದು ಲಂಚ ಸ್ವೀಕರಿಸುವಂತಿರಲಿಲ್ಲ, ತಪ್ಪಿದರೆ ಉಗ್ರ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

## 5.ಸೈನಿಕ ಆಡಳಿತ :

ಸೈನಿಕ ಆಡಳಿತವನ್ನು ಸುಧಾರಿಸಲು ಪ್ರಮುಖ ಕಾರಣಗಳೆಂದರೆ, ದಂಗೆಗಳನ್ನು ಅಡಗಿಸಲು, ಮಂಗೋಲರ ದಂಗೆಗಳನ್ನು ತಡೆಗಟ್ಟಲು. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ತರುವುದರೊಂದಿಗೆ ರಾಜ್ಯವನ್ನು ವಿಸ್ತರಿಸಲು ಪ್ರಬಲ ಕೇಂದ್ರ ಸೈನ್ಯವನ್ನು ಜಾರಿಗೆ ತರಲು ಮುಂದಾಗಿ ತನ್ನ ಹಿಂದಿನ ಸುಲ್ತಾನರ ರೀತಿ ಸೈನ್ಯಕ್ಕಾಗಿ ಪ್ರಾಂತೀಯ ಗೌರ್‍ನರ್‌ಗಳನ್ನು ಅವಲಂಭಿತನಾಗಿರದೆ ಕೇಂದ್ರ ಸರ್ಕಾರದ ವತಿಯಿಂದ ಸದಾ ಸಿದ್ಧವಿರುವ 'ಸ್ಥಾಯಿ' ಸೈನ್ಯವನ್ನು ರೂಪಿಸಿದನು. ಸೈನಿಕ ವ್ಯವಸ್ಥೆಯಲ್ಲಿ ಜಾರಿಗೆ ತಂದ ಪ್ರಮುಖ ಸುಧಾರಣೆಗಳೆಂದರೆ, ಸೈನಿಕ ಆಡಳಿತವನ್ನು ನೋಡಿಕೊಳ್ಳಲು "ಆರಿಜ್–ಇ–ಮುಮಾಲಿಕ್" ಎಂಬ ಮಂತ್ರಿಯನ್ನು ನೇಮಿಸಲಾಯಿತು. ಕೇಂದ್ರ ಸರ್ಕಾರವೇ ಸೈನ್ಯದ ನೇಮಕಾತಿ, ಶಸ್ತ್ರಾಸ್ತ್ರಗಳ ಪೂರೈಕೆ, ಸೈನಿಕರ ತರಬೇತಿ ಮತ್ತು ವೇತನವನ್ನು ನೋಡಿಕೊಳ್ಳುತ್ತಿತ್ತು. ಸೈನಿಕರ ವೇತನ ನಿಗದಿತವಾಗಿತ್ತು, ವೇತನವನ್ನು ಹಣದ ರೂಪದಲ್ಲಿ ನೀಡಲಾಗುತ್ತಿತ್ತು. ಅಂದರೆ ಒಂದು ಕುದುರೆ ಹೊಂದಿರುವ ಒಬ್ಬ ಸೈನಿಕನಿಗೆ 234

ಟಂಕಗಳು. ಎರಡು ಕುದುರೆ ಹೊಂದಿರುವ ಒಬ್ಬ ಸೈನಿಕನಿಗೆ 234 ಟಂಕಗಳೊಂದಿಗೆ 78 ಟಂಕಗಳನ್ನು ಹೆಚ್ಚಾಗಿ ನೀಡಲಾಗಿತ್ತು. 4.75.000 ಅಶ್ವಸೈನಿಕರಿದ್ದರು, ಜೊತೆಗೆ ಗಜದಳವೂ ಸಹ ಪ್ರಧಾನವಾಗಿತ್ತು. ಕತ್ತಿಗಳು, ಬಿಲ್ಲು, ಬಾಣ, ಕಠಾರಿ ಮತ್ತು ಯುದ್ಧಕೊಡಲಿಗಳು ಪ್ರಮುಖ ಯುದ್ಧಾಸ್ತ್ರಗಳಾಗಿದ್ದವು. ಟರ್ಕಿ ಮಾಧರಿಯಲ್ಲಿ ಸೈನ್ಯವನ್ನು ವ್ಯವಸ್ಥೆಗೊಳಿಸಲಾಗಿತ್ತು. ಸೈನಿಕರ ಹಾಜರಾತಿ ಸಮಸ್ಯೆಯನ್ನು ತಪ್ಪಿಸಲು ದಾಖಲಾತಿ (ಹುಯಿಲು) ಪದ್ಧತಿಯನ್ನು ಜಾರಿಗೊಳಿಸಿದ್ದನು. ಕುದುರೆಗಳಿಗೆ ಮುದ್ರೆ ಹಾಕುವ 'ದಗ್' ಪದ್ಧತಿಯನ್ನು ಜಾರಿಗೆ ತಂದನು. ಈ ದಾಖಲೆಗಳನ್ನು ನೋಡಿಕೊಳ್ಳುವ ಮಂತ್ರಿ 'ದಿವಾನ್–ಇ–ಅರ್ಜಾ' ವಾಯುವ್ಯ ಭಾರತದ ಗಡಿಯಲ್ಲಿ ಕೋಟೆಗಳನ್ನು ದುರಸ್ಥಿಗೊಳಿಸಿ ಸಿರಿ, ದೆಹಲಿ, ಕಂಪಿಲ್, ಪಾಟಿಯಾಲ, ಮತ್ತು ಬೋಜ್‌ಪುರ್‌ಗಳಲ್ಲಿ ಹೊಸ ಕೋಟೆಗಳನ್ನು ಕಟ್ಟಿಸಿದನು.

### 6.ಮಾರುಕಟ್ಟೆ ಸುಧಾರಣೆಗಳು :

ಅಲ್ಲಾವುದ್ದೀನ್ ಖಿಲ್ಜಿಯ ಸೈನಿಕ ದಿಗ್ವಿಜಯಗಳಿಗಿಂತ ಅವನು ಜಾರಿಗೆ ತಂದ ಆರ್ಥಿಕ ಸುಧಾರಣೆಗಳು ಇತಿಹಾಸದಲ್ಲಿ ಅವನ ಹೆಸರನ್ನು ಶಾಶ್ವತಗೊಳಿಸಿವೆ. ಇದಕ್ಕೆ ಕಾರಣಗಳೆಂದರೆ ರಾಜ್ಯದ ಜನಜೀವನ ಮತ್ತು ಸೈನಿಕರ ಜೀವನ ನಿರ್ವಹಣೆಯನ್ನು ಸುಧಾರಿಸಲು. ಸೈನಿಕರ ವೇತನ ಮತ್ತು ವಸ್ತುಗಳ ಬೆಲೆಗಳ ತಾರತಮ್ಯವನ್ನು ಸರಿಪಡಿಸಲು. ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು. ವರ್ತಕರ ಮೋಸ ಮತ್ತು ವಂಚನೆಯನ್ನು ನಿಯಂತ್ರಿಸುವುದು. ಇವನ ಮಾರುಕಟ್ಟೆಯ ಸುಧಾರಣೆಯನ್ನು ಕುರಿತಂತೆ ಅಮೀರ್ ಖುಸ್ರು : "ಸಾಮಾನ್ಯ ಜನರ ಕಲ್ಯಾಣಕ್ಕಾಗಿ ಈ ನೀತಿಯನ್ನು ಪರಿಚಯಿಸಿದ" ಎಂದು ತಿಳಿಸಿದ್ದಾನೆ. ಅಲ್ಲಾವುದ್ದೀನ್ ಖಿಲ್ಜಿ ಬೇರೆ ಬೇರೆ ವಸ್ತುಗಳಿಗೆ ನಾಲ್ಕು ಬೇರೆ ಬೇರೆ ಮಾರುಕಟ್ಟೆಗಳನ್ನು ಸ್ಥಾಪಿಸಿದ್ದನು. ಅಂದರೆ ಕೇಂದ್ರೀಯ ದವಸಧಾನ್ಯಗಳ ಮಾರುಕಟ್ಟೆ ಅಥವಾ 'ಮಂಡಿ, ಸರೈ–ಇ–ಅದಲ್' ಎಂಬ ಕೇಂದ್ರ ಉಗ್ರಾಣಮಾರುಕಟ್ಟೆ, ಕುದುರೆಗಳು, ಗುಲಾಮರು ಮತ್ತು ಜಾನುವಾರುಗಳ ಮಾರುಕಟ್ಟೆ, ಎಲ್ಲಾ ವಸ್ತುಗಳನ್ನು ಒಳಗೊಂಡಂತೆ ಸಮಾನ್ಯ ಮಾರುಕಟ್ಟೆ. ಇವನ ಮಾರುಕಟ್ಟೆ ವ್ಯವಸ್ಥೆಯಲ್ಲಿ ಕಂಡುಬರುವ ಪ್ರಮುಖಾಂಶಗಳೆಂದರೆ ಸರ್ಕಾರ ವಸ್ತುಗಳ ಬೆಲೆಗಳನ್ನು ನಿಗಧಿಪಡಿಸುತ್ತಿತ್ತು, ಖಾಸಗಿ ಜನರು ದಾನ್ಯಗಳನ್ನು ಸಂಗ್ರಹಿಸಿಡಲು ಅವಕಾಶವಿರಲಿಲ್ಲ, ರಾಜ್ಯ ಧಫ್ತರದಲ್ಲಿ ನಮೂದಿಸಿರುವ ವ್ಯಾಪಾರಿಗಳು ರೈತರಿಂದ ದಾನ್ಯಗಳನ್ನು ಕೊಳ್ಳಬಹುದಿತ್ತು, ಷಹನಾ–ಇ–ಮಂಡಿ ಎಂಬ ಕಛೇರಿಯಲ್ಲಿ ವರ್ತಕರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಿತ್ತು, ಆಮದು ಮಾಡಿಕೊಂಡ ವಸ್ತುಗಳ ಬೆಲೆಯಲ್ಲಿ ವ್ಯತ್ಯಾಸವಾದರೆ ಅದರ ನಷ್ಟವನ್ನು ಸರ್ಕಾರವೇ ಭರಿಸುತ್ತಿತ್ತು. ಮಾರುಕಟ್ಟೆಯನ್ನು ದಿವಾನ್–ಇ–ರಿಯಾಸತ್ ಮತ್ತು ಷಹನ–ಇ–ಮಂಡಿ ಎಂಬ ಅಧಿಕಾರಿಗಳು ನಿಯಂತ್ರಿಸುತ್ತಿದ್ದರು. ಇವರಿಗೆ ಸಹಾಯಕರಾಗಿ ಸರೈ ಆಲ್ (ನ್ಯಾಯಾಧೀಶ), ಮುನ್ಸಿ (ಗೂಢಾಚಾರಿ), ಬರೀದ್ (ಪರಿವೀಕ್ಷಣ ಅಧಿಕಾರಿ) ಮುಂತಾದ ಅಧಿಕಾರಿಗಳಿದ್ದರು. ಯಾರಾದರೂ ಹೆಚ್ಚಿನ ಬೆಲೆಯ ವಸ್ತುವನ್ನು ಕೊಳ್ಳಬೇಕಾದರೆ ದಿವಾನ್–ಇ–ರಿಯಾಸತ್ ಮತ್ತು ದಿವಾನ್–ಎ–ಮಂಡಿಯಾ ಅನುಮತಿಯನ್ನು ಪಡೆಯಬೇಕಿತ್ತು. ವರ್ತಕರು ವಸ್ತುವನ್ನು ಕಡಿಮೆ ತೂಗಿ ವಂಚಿಸಿದಷ್ಟು ಮಾಂಸವನ್ನು ಅವರ ದೇಹದಿಂದ ತೆಗೆಯಲಾಗುವುದೆಂಬ ಆಜ್ಞೆಯಿದ್ದಿದ್ದರಿಂದ ಮೋಸಕ್ಕೆ ಅವಕಾಶವಿರಲಿಲ್ಲ. ಸರ್ಕಾರ ನಿಗಧಿಪಡಿಸಿದ ವಸ್ತುಗಳ ಬೆಲೆಗಳ ಪಟ್ಟಿ.

| ಕ್ರ. ಸಂ | ವಸ್ತುಗಳು | ಪ್ರಮಾಣ (ಮಣ/ಸೇರಿಗೆ) | ಬೆಲೆ |
|---|---|---|---|
| 01 | ಗೋಧಿ | 1 ಮಣಕ್ಕೆ | 1 $^1/_2$ ಜಿತಾಲ್ |
| 02 | ಬಾರ್ಲಿ | 1 ಮಣಕ್ಕೆ | 4 ಜಿತಾಲ್ |
| 03 | ಭತ್ತ | 1 ಮಣಕ್ಕೆ | 5 ಜಿತಾಲ್ |
| 04 | ಉದ್ದು | 1 ಮಣಕ್ಕೆ | 5 ಜಿತಾಲ್‌ಗಳು |
| 05 | ಬೇಳೆ (ನಖುದ್ ) | 1 ಮಣಕ್ಕೆ | 5 ಜಿತಾಲ್‌ಗಳು |
| 06 | ಉಪ್ಪು | 2 $^1/_2$ಮಣಕ್ಕೆ | 1 $^1/_2$ ಜಿತಾಲ್‌ಗಳು |
| 07 | ಸಕ್ಕರೆ | 1 ಸೇರಿಗೆ | 1 $^1/_2$ ಜಿತಾಲ್‌ಗಳು |
| 08 | ಕಂದುಸಕ್ಕರೆ | 1 ಸೇರಿಗೆ | $^1/_4$(ಕಾಲು) ಜಿತಾಲ್‌ಗಳು |
| 09 | ಬೆಣ್ಣೆ | 2 $^1/_2$ಸೇರಿಗೆ | 1 ಜಿತಾಲ್ ಗಳು |
| 10 | ಎಳ್ಳೆಣ್ಣೆ | 3 ಸೇರಿಗೆ | 1 ಜಿತಾಲ್ ಗಳು |
| 11 | ಉತ್ತಮ ತಳಿಯ ಕುದುರೆಗೆ | 1 ಕ್ಕೆ | 100–200 ಟಂಕಗಳು |
| 12 | ಉತ್ತಮ ತಳಿಯ ಹಸುಗೆ | 1 ಕ್ಕೆ | 10–12 ಟಂಕಗಳು |
| 13 | ಸುಂದರ ಸ್ತ್ರೀ ಗುಲಾಮಳು | ಒಬ್ಬರಿಗೆ | 20–40 ಟಂಕಗಳು |
| 14 | ಪುರುಷ ಗುಲಾಮ | ಒಬ್ಬರಿಗೆ | 20–30 ಟಂಕಗಳು |

## ಮಹಮ್ಮದ್- ಬಿನ್- ತುಘಲಕ್ : ಕ್ರಿ.ಶ. 1325–1351.

ಘಿಯಾಸುದ್ದೀನ್‌ನ ನಿಧನದ ನಂತರ ಕ್ರಿ.ಶ. 1325ರಂದು 'ಜೌನಾಖಾನನು' ಮಹಮ್ಮದ್-ಬಿನ್-ತುಘಲಕ್ ಎಂಬ ಬಿರುದಿನಿಂದ ತುಘಲಕಾಬಾದ್‌ನಲ್ಲಿ ಸಿಂಹಾಸನವೇರಿ 40 ದಿನಗಳ ನಂತರ ದೆಹಲಿಗೆ ಬಂದು ಆಡಳಿತವನ್ನಾರಂಭಿಸಿದನು. ದೆಹಲಿ ಸುಲ್ತಾನರಲ್ಲೇ ಇವನದು ಆಕರ್ಷಕವಾದ ವ್ಯಕ್ತಿತ್ವದ ವ್ಯಕ್ತಿತ್ವವಾಗಿದೆ. ಪರ್ಷಿಯನ್ ಮತ್ತು ಅರಾಬಿಕ್ ವಿದ್ವಾಂಸ ಮತ್ತು ವೈಜ್ಞಾನಿಕ ಮನೋಭಾವದವನಾಗಿದ್ದ. ಧಾರ್ಮಿಕ ಮತ್ತು ತಾತ್ವಿಕ ವಿಚಾರಗಳಲ್ಲಿ ಉದಾರವಾದಿಯಾಗಿದ್ದನು. ಸಂಯಮತೆ ಇಲ್ಲದ ದುಡುಕಿನ ಸ್ವಭಾವದವನಾಗಿದ್ದರಿಂದ ಇವನ ಯೋಜನೆಗಳು ವಿಫಲವಾದವು. ತನ್ನ ನೆರೆಯ ಚೀನಾ, ಇರಾನ್, ಮತ್ತು ಈಜಿಪ್ಟ್‌ಗಳೊಂದಿಗೆ ಉತ್ತಮ ರಾಜತಾಂತ್ರಿಕತೆ ಹೊಂದಿದ್ದನು.

## ಮಹಮ್ಮದ್-ಬಿನ್-ತುಘಲಕ್‌ನ ಆಡಳಿತಾತ್ಮಕ ಪ್ರಯೋಗಗಳು :

ಮಹಮ್ಮದ್-ಬಿನ್-ತುಘಲಕ್ ದೇಶಿಯಾ ಮತ್ತು ವಿದೇಶಿಯ ವ್ಯವಹಾರಗಳಲ್ಲಿ ಹೊಸ ನೀತಿ ಮತ್ತು ಪ್ರಯೋಗಗಳನ್ನು ಕೈಗೊಳ್ಳುವ ಆಸಕ್ತಿ ಹೊಂದಿದ್ದ ಇವನು ಭಾರತವನ್ನಾಳಿದ ದೊರೆಗಳಲ್ಲಿ ಅತ್ಯಂತ ವಿವಾದಾಸ್ಪದನಾದ ಇವನನ್ನು 'ಐಲುದೊರೆ' ಮತ್ತು 'ಪರಸ್ಪರ ವೈರುದ್ಯ ಗುಣಗಳ ಮಿಶ್ರಣ' ಎನ್ನಲಾಗಿದೆ. ಇವನು ಜಾರಿಗೆ ತಂದ ಐದು (5) ಆಡಳಿತಾತ್ಮಕ ಪ್ರಯೋಗಗಳನ್ನಾಧರಿಸಿ ಅವನ ವ್ಯಕ್ತಿತ್ವ, ಕಾರ್ಯಯೋಜನೆಯ ಸಫಲತೆ ಮತ್ತು ವಿಫಲತೆಗಳನ್ನು ತಿಳಿಯಬಹುದಾಗಿದೆ.

## 1. ದೋ- ಅಬ್ ಪ್ರಾಂತ್ಯದಲ್ಲಿ ಆರ್ಥಿಕ ಪ್ರಯೋಗ : ಕ್ರಿ.ಶ. 1326

ಗಂಗಾ–ಯಮುನಾ ನದಿಗಳ ನಡುವಣದ ದೋ–ಅಬ್ ಪ್ರಾಂತ್ಯದಲ್ಲಿ ಕೈಗೊಂಡ ಭೂ ಕಂದಾಯದ ಹೆಚ್ಚಳದ ಪ್ರಯೋಗವೇ ಇವನ ಆಡಳಿತಾತ್ಮಕ ಪ್ರಯೋಗಗಳಲ್ಲಿ ಪ್ರಥಮ ಪ್ರಯೋಗವಾಗಿದ್ದು, ಇದು ವಿವೇಚನೆ ಇಲ್ಲದ ಆರ್ಥಿಕ ಪ್ರಯೋಗವಾಗಿದೆ. ಇದಕ್ಕೆ ಕಾರಣಗಳೆಂದರೆ ದೋ–ಅಬ್ ಪ್ರಾಂತ್ಯದ ಶ್ರೀಮಂತ ರೈತರ ಕ್ರಾಂತಿಕಾರಕ ಮನೋಭಾವವನ್ನು ಅಡಗಿಸುವುದು. ತನ್ನ ಸೈನ್ಯವನ್ನು ಅಧಿಕಗೊಳಿಸಿ ಆಡಳಿತ ವರ್ಗವನ್ನು ಸುಧಾರಿಸಲು. ಈ ಮೇಲಿನ ಕಾರಣದಿಂದ ತೆರಿಗೆಯ ಪ್ರಮಾಣವನ್ನು ಹೆಚಿಸಿದ್ದು ಸರಿಯಾದ ಕ್ರಮವಾದರೂ ಸೂಕ್ತವಾದ ಸಮಯವಾಗಿರಲಿಲ್ಲ ಏಕೆಂದರೆ ಹಿಂದಿನ ಖಿಲ್ಜಿ ಸುಲ್ತಾನರು ವಿಧಿಸಿದ್ದ ತೆರಿಗೆಯೇ ಅಧಿಕವಾಗಿದ್ದು ರೈತರು ತೆರಿಗೆಯನ್ನು ನೀಡಲು ಉತ್ತಮ ಸ್ಥಿತಿಯಲ್ಲಿರಲಿಲ್ಲ. ದೋ–ಅಬ್ ಪ್ರದೇಶದಲ್ಲಿ ಭೀಕರವಾದ ಕ್ಷಾಮ ಸಂಭವಿಸಿತ್ತು. ಈ ಪರಿಸ್ಥಿತಿಯಲ್ಲೂ ತೆರಿಗೆಯನ್ನು ಹೆಚಿಸಿದ್ದು ಸರಿಯಾದ ಕ್ರಮವಾಗಿರಲಿಲ್ಲ. ತೆರಿಗೆ ವಸೂಲಿಗಾರರು ಬಲತ್ಕಾರದಿಂದ ತೆರಿಗೆಯನ್ನು ವಸೂಲಿಮಾಡಿದ್ದರಿಂದ ರೈತರು ನಿರ್ಗತಿಕರಾಗಿ ತೆರಿಗೆಯನ್ನು ಕೊಡಲಾಗದೆ ಕಾಡುಗಳಲ್ಲಿ ತಲೆ ಮರೆಸಿಕೊಂಡು ವಿಧ್ವಾಂಸಕ ಕೃತ್ಯಗಳಲ್ಲಿ ತೊಡಗಿದರು. ಉತ್ಪಾದನೆಯ ಪ್ರಮಾಣ ಕುಂಠಿತವಾಗಿ ಭೂಮಿ ಬಂಜರು ಭೂಮಿಯಾಗಿ ಮಾರ್ಪಟ್ಟಿತ್ತು. ಭೂ ಕಂದಾಯಕ್ಕಿಂತ ಮನೆಕಂದಾಯ (ಘಾರಿ) ಮತ್ತು ಗೋಮಾಳದ (ಚರೈ) ತೆರಿಗೆಗಳು ದುಪ್ಪಟ್ಟಾಗಿದ್ದರಿಂದ ರೈತರು ಜೀವನ ನಿರ್ವಹಣೆಗೆ ಪಲಾಯನ ಮಾಡಬೇಕಾಯಿತು. ಈ ಪರಿಣಾಮಗಳ ಕುರಿತು ತಡವಾಗಿ ಅರಿತ ಮಹಮದ್–ಬಿನ್–ತುಘಲಕ್ ರೈತರಿಗೆ ಮತ್ತು ಕೃಷಿಗೆ ಸೌಲಭ್ಯ ಒದಗಿಸಲು ಮುಂದಾಗಿ 'ದಿವಾನ್–ಇ–ಕೋಹಿ' ಎಂಬ ಇಲಾಖೆಯನ್ನು ಸ್ಥಾಪಿಸಿ ದೋ–ಅಬ್ ಪ್ರಾಂತ್ಯದಲ್ಲಿ ಕೆಲವು ಸುಧಾರಣೆಗಳನ್ನು ಕೈಗೊಂಡನು. ಅಂದರೆ ಬಂಜರು ಭೂಮಿಯನ್ನು ಸಾಗುವಳಿಗೊಳಪಡಿಸಲಾಯಿತು. ರೈತರಿಗೆ ಸರ್ಕಾರ ಸಾಲ ಸೌಲಭ್ಯ ಮತ್ತು ಗಂಜಿಕೇಂದ್ರಗಳ ವ್ಯವಸ್ಥೆ ಮಾಡಿತು. ಬಾವಿಗಳನ್ನು ತೋಡಿಸಿ ಕೆರೆ. ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಲಾಯಿತು. ಕೃಷಿ ಬೆಳವಣಿಗೆಯನ್ನು ನೋಡಿಕೊಳ್ಳಲು 'ಅಮೀರ್–ಇ–ಕೋಹಿ' ಎಂಬ ಅಧಿಕಾರಿಯನ್ನು ನೇಮಿಸಲಾಯಿತು. ದಿವಾನ್–ಇ–ಕೋಹಿ ಇಲಾಖೆಯು ಸುಮಾರು "60 ಮೈಲಿ ಸುತ್ತಳತೆಯ ಸಾಗುವಳಿ ಭೂಮಿಯನ್ನು ರಾಜ್ಯದ ಸುಧಾರಿತ ಕೃಷಿಗಾಗಿ ಆಯ್ಕೆ ಮಾಡಿ ವಿವಿಧ ಬೆಳೆಗಳನ್ನು ಮೂರು ವರ್ಷಗಳ ಅವದಿಯಲ್ಲಿ ಸುಮಾರು 70 ಲಕ್ಷ ಟಂಕಗಳ ವೆಚ್ಚದಲ್ಲಿ ಪುನರಾವರ್ತಿಸಿ ಬೆಳೆಯಲಾಯಿತು" ಆದರೂ ಈ ಯೋಜನೆ ವಿಫಲವಾಯಿತು, ಕಾರಣ ಸಾಗುವಳಿಗೆ ಆಯ್ಕೆ ಮಾಡಿದ್ದ ಭೂಮಿ ಫಲವತ್ತಾಗಿರಲಿಲ್ಲ. ಭ್ರಷ್ಟ ಅಧಿಕಾರಿಗಳು ಮತ್ತು ಸಾಗುವಳಿದಾರರ ನಿರಾಸಕ್ತಿ. ಪರಿಹಾರದ ಸಹಾಯವು ಪ್ರಜೆಗಳಿಗೆ ತಲುಪದೆ ಆಡಳಿತಗಾರರಲ್ಲಿ ಸೇರಿತು. ಇದರಿಂದ ಈ ಯೋಜನೆಯನ್ನು ಸೂಕ್ತ ಸಮಯದಲ್ಲಿ ಕೈಗೊಳ್ಳಲಾಗದೆ ವಿಫಲವಾಗಿ, ಈ ಪ್ರಾಂತ್ಯದಲ್ಲಿ ಪ್ರತಿ ವರ್ಷ ವಸೂಲಾಗುತ್ತಿದ್ದಷ್ಟು ಕಂದಾಯ ವಸೂಲಾಗದೆ ಸುಲ್ತಾನ ಪ್ರಜೆಗಳಿಗೆ ಅಪ್ರಿಯನಾದನು.

## 2.ರಾಜಧಾನಿಯ ಬದಲಾವಣೆ : ಕ್ರಿ.ಶ. 1327

ಲೇನ್ ಪೋಲ್‌ರವರು ಮಹಮದ್–ಬಿನ್–ತುಘಲಕ್‌ನ ರಾಜಧಾನಿ ಬದಲಾವಣೆಯನ್ನು ಕುರಿತಂತೆ "ದೌಲತಾಬಾದ್ ತಪ್ಪು ಮಾರ್ಗ ಹಿಡಿದ ಶಕ್ತಿಗೆ ಉತ್ತಮವಾದ ಸ್ಮಾರಕವಾಗಿದೆ" ಎಂದಿದ್ದಾನೆ ಏಕೆಂದರೆ ಈ ಯೋಜನೆ ಸಂಪೂರ್ಣ ವಿಫಲವಾಯಿತು. ಮಹಮ್ಮದ್–ಬಿನ್–ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿ (ದೌಲತಾಬಾದ್) ಗೆ ಬದಲಾಯಿಸಿದನು. ಈ ಕ್ರಮ ಉತ್ತಮ ಆಲೋಚನೆಯಿಂದ ಕೂಡಿತ್ತು. ಏಕೆಂದರೆ ದೇವಗಿರಿ ಸಮ್ರಾಜ್ಯದ ಮಧ್ಯಭಾಗದಲ್ಲಿದ್ದು ಆಯಕಟ್ಟಿನ ಪ್ರದೇಶವಾಗಿತ್ತು. ಉತ್ತರ ಭಾರತಕ್ಕಿಂತ ದಖ್ಖನ್ ಅತ್ಯಂತ ಸಂಪದ್ಭರಿತವಾಗಿತ್ತು. ದಖ್ಖನ್‌ನಲ್ಲಿ ಇಸ್ಲಾಂಧರ್ಮವನ್ನು ಸ್ಥಾಪನೆ ಮಾಡುವ ಉದ್ದೇಶ ಹೊಂದಿದ್ದನು. ರಾಜದಾನಿಯನ್ನು ಮಂಗೋಲರ ದಾಳಿಯಿಂದ ರಕ್ಷಿಸಿಕೊಳ್ಳುವುದು. (ದೆಹಲಿ ಪದೇ ಪದೇ ಮಂಗೋಲರ ದಾಳಿಗೆ ಒಳಗಾಗುತ್ತಿತ್ತು) ದೆಹಲಿ ನಾಗರೀಕರ ಅನೂಚಿತ ವರ್ತನೆಯಿಂದ ಪರಾಗಲು. ಈ ಕೆಲವು ಕಾರಣಗಳಿಂದ ರಾಜಧಾನಿಯ ಬದಲಾವಣೆಯ ತೀರ್ಮಾನವನ್ನು ಕೈಗೊಂಡು ಕೆಲವು ಪೂರ್ವಕ್ರಮಗಳನ್ನು ಕೈಗೊಂಡನು. ಜನತೆಯ ಪ್ರಯಾಣಕ್ಕಾಗಿ ವಿಶಾಲವಾದ ಸೂಕ್ತ ಮಾರ್ಗವನ್ನು ನಿರ್ಮಿಸಲಾಯಿತು. ರಸ್ತೆಯ ಎರಡೂ ಬದಿಗಳಲ್ಲಿ ಸಾಲು ಮರಗಳನ್ನು ಬೆಳೆಸಲಾಗಿತ್ತು. ದೆಹಲಿ ಹಾಗೂ ದೌಲತಾಬಾದ್‌ಗಳ ನಡುವೆ ವ್ಯವಸ್ಥಿತ ಅಂಚೆ ಸೌಕರ್ಯ ಏರ್ಪಡಿಸಲಾಗಿತ್ತು. ಪ್ರತೀ ಎರಡು ಮೈಲಿಗೆ ಒಂದರಂತೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಜನತೆಗೆ ಉಚಿತ ವಸತಿ ಮತ್ತು ಆಹಾರವನ್ನೊದಗಿಸಿ ಅವರ ನಷ್ಟವನ್ನು ಭರಿಸಲು ಪರಿಹಾರ ನೀಡಲಾಯಿತು. ಆದರೂ ಸುಮಾರು 700 ಮೈಲಿಗಳ 40 ದಿನಗಳ ಪ್ರಮಾಣದಲ್ಲಿ ದೆಹಲಿಯ ಜನರು ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಿದರು. ದೆಹಲಿ ದರೋಡೆಕೋರರಿಗೆ ಬಲಿಯಾಯಿತು. ಸಾವಿರಾರು ಜನ ಸಾವಿಗೀಡಾದರು. ದೆಹಲಿ ತನ್ನ ವೈಭವವನ್ನು ಕಳೆದುಕೊಂಡಿತು. ಅಪರಿಚಿತ ಸ್ಥಳದಲ್ಲಿ ದೇಶಭ್ರಷ್ಟರಂತೆ ನಿರಾಸೆಗೊಂಡು ಸುಲ್ತಾನನ ಯೋಜನೆಯ ವಿಫಲತೆಗೆ ಸಾಕ್ಷಿಯಾದರು. ತನ್ನ ದುಡುಕಿನ ಯೋಜನೆಯ ವಿಫಲತೆಯ ಅರಿವಾದ ಸುಲ್ತಾನ ಪುನಃ ತನ್ನ ಜನತೆಗೆ ದೆಹಲಿಗೆ ಪ್ರಯಾಣ ಬೆಳೆಸಲು ಆದೇಶಿಸಿದನು. ಇದು ಮತ್ತಷ್ಟು ಘೋರ ಪರಿಣಾಮವನ್ನು ಸೃಷ್ಟಿಸಿತ್ತು. ಇಂತಹ ಪ್ರಯತ್ನಕ್ಕೆ ಬದಲಾಗಿ ಸುಲ್ತಾನ ಕೇವಲ ಸರ್ಕಾರಿ ಅಧಿಕಾರಿಗಳು ಮತ್ತು ಕಛೇರಿಗಳನ್ನು ಬದಲಾಯಿಸಬಹುದಿತ್ತು. ಜನತೆ ತದನಂತರ ತಾವಾಗೆ ಬಂದು ನೆಲೆಸಿ ಹೊಸ ರಾಜಧಾನಿಗೆ ಹೊಂದಿಕೊಳ್ಳುತ್ತಿದ್ದರು. ಒಟ್ಟಾರೆಯಾಗಿ ಈ ಪ್ರಯತ್ನ ಮಹಮ್ಮದ್–ಬಿನ್–ತುಘಲಕ್‌ನ ಅವಿವೇಕದ ಕ್ರಮವಾಗಿತ್ತು.

## 3. ನಾಣ್ಯ ಸುಧಾರಣೆ : ಕ್ರಿ.ಶ. 1330

ಮಹಮ್ಮದ್–ಬಿನ್–ತುಘಲಕ್ ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ ನಾಣ್ಯವ್ಯವಸ್ಥೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸಿದನು ಅಂದರೆ ಅಮೂಲ್ಯ ಲೋಹಗಳ ಮೌಲ್ಯಕ್ಕನುಗುಣವಾಗಿ ಅವುಗಳ ಭಾಗಗಳನ್ನು ಸರಿಹೊಂದಿಸಿದನು. 'ದಿನಾರ್' (ಇಬನ್‌ಬತೂತನ ಪ್ರಕಾರ) ಎಂಬ 200 ಗ್ರೈನ್ ತೂಕದ ಚಿನ್ನದ ನಾಣ್ಯವನ್ನು ಚಲಾವಣೆಗೆ ತಂದನು. ದಖಿನ್ ದಂಡಯಾತ್ರೆಗಳಿಂದ ದೊರೆತ ಚಿನ್ನ ಮತ್ತು ಬೆಳ್ಳಿಯ ಪರಿಣಾಮ, ಚಿನ್ನ ಮತ್ತು ಬೆಳ್ಳಿಯ ಸಾಪೇಕ್ಷ ಮೌಲ್ಯ ಕುಸಿದಿತ್ತು. ಆದ್ದರಿಂದ 175 ಗ್ರೈನ್‌ಗಳ ತೂಕದ 'ಅದಲಿ' ಎಂಬ ನಾಣ್ಯವನ್ನು ಚಲಾವಣೆಗೆ ತಂದನು. ಮಹಮದ್–ಬಿನ್–ತುಘಲಕ್ ಚಲಾವಣೆಗೆ ತಂದ ನಾಣ್ಯಗಳ ಆಕಾರ, ಅವುಗಳ ಮೇಲಿನ ಕೆತ್ತನೆಗಳನ್ನು ಗಮನಿಸಿ ಎಡ್ವರ್ಡ್ ಥಾಮಸ್ : "ಮಹಮ್ಮದ್–ಬಿನ್–ತುಘಲಕ್‌ನನ್ನು 'ಹಣಗಾರರ ರಾಜ'ನೆಂದು" ಕರೆದಿದ್ದಾರೆ. ಮಹಮದ್–ಬಿನ್–ತುಘಲಕ್ ನಡೆಸಿದ ಪ್ರಯೋಗಗಳಲ್ಲಿ ಅತ್ಯಂತ ಪ್ರಮುಖವಾದದ್ದೆಂದರೆ ಕ್ರಿ.ಶ. 1329 ಮತ್ತು 1330ರ ನಡುವೆ ತಾಮ್ರದ ನಾಣ್ಯವನ್ನು ಚಲಾವಣೆಗೆ ತಂದುದು. ಇದಕ್ಕೆ ಪ್ರಮುಖ ಕಾರಣಗಳೆಂದರೆ ರಾಜಧಾನಿಯ ಬದಲಾವಣೆ ಮತ್ತು ತೆರಿಗೆ ಸುಧಾರಣೆಯಿಂದ ಖಜಾನೆ ಬರಿದಾಗಿತ್ತು. ಸೈನಿಕ ವೆಚ್ಚದ ನಿರ್ವಹಣೆಯನ್ನು ಸರಿದೂಗಿಸಲು, ಮಾರುಕಟ್ಟೆಯಲ್ಲಿ ಉಂಟಾದ ಚಿನ್ನ ಬೆಳ್ಳಿಯ ಅಭಾವ, ಚೀನಾ ಮತ್ತು ಪರ್ಷಿಯಾದ ನಾಣ್ಯ ಚಲಾವಣೆಯ ಪ್ರಭಾವ, 13ನೇ ಶತಮಾನದ ಕೊನೆಯ ವೇಳೆಗೆ ಚೀನಾದ ಮಂಗೋಲರ ನಾಯಕ 'ಕುಬ್ಲಾಯ್ ಖಾನ್' ಕಾಗದದ ನಾಣ್ಯವನ್ನು ಚಲಾವಣೆಗೆ ತಂದಿದ್ದನು. ಕ್ರಿ.ಶ. 1294ರಲ್ಲಿ ಪರ್ಷಿಯಾದ ದೊರೆ 'ಗಯ್‌ಖಾಟೂ' ನಾಣ್ಯ ಚಲಾವಣೆಯಲ್ಲಿ ಪ್ರಯೋಗ ಮಾಡಿದ್ದನು. ಆಡಳಿತಾತ್ಮಕ ಸುಧಾರಣೆಗೆ ಅವಶ್ಯಕ ಸಂಪನ್ಮೂಲವನ್ನು ಕ್ರೂಡೀಕರಿಸುವ ಕಾರಣಗಳಿಂದಾಗಿ ಕ್ರಿ.ಶ. 1329–1330ರಲ್ಲಿ 'ತಾಮ್ರ'ದ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದನು. ಇದನ್ನು ' ಸಾಂಕೇತಿಕ ನಾಣ್ಯ' ಪದ್ಧತಿ ಎಂದು ಕರೆಯಲಾಗಿದೆ. ಅಂದರೆ ಹಿಂದಿನ ಬೆಳ್ಳಿ, ಬಂಗಾರದ ನಾಣ್ಯಗಳಿಗೆ ತಾಮ್ರದ ನಾಣ್ಯಗಳು ಮೌಲ್ಯದಲ್ಲಿ ಸಮವೆಂದೂ ಮತ್ತು ತಾಮ್ರದ ನಾಣ್ಯಗಳನ್ನು ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳಿಗೆ ಸಮವಾಗಿ ಎಲ್ಲಾ ವ್ಯವಹಾರಗಳಿಗೂ ಬಳಸಬೇಕೆಂದು ಆಜ್ಞೆಯನ್ನು ಹೊರಡಿಸಿದ್ದನು. ಈ ಯೋಜನೆಯು ಈ ಹಿಂದಿನ ಯೋಜನೆಗಳಂತೆಯೇ ವಿಫಲವಾಯಿತು. ಏಕೆಂದರೆ ಈ ಯೋಜನೆ ಕಾಲದ ದೃಷ್ಟಿಯಿಂದ ಮುಂದುವರೆದ ಯೋಜನೆಯಾಗಿದ್ದರೂ ಜನತೆ ಇದರ ಪ್ರಾಮುಖ್ಯತೆಯನ್ನು ಸರಿಯಾಗಿ

ಅರ್ಥಮಾಡಿಕೊಳ್ಳಲು ವಿಫಲರಾಗಿದ್ದರು. ನಾಣ್ಯಗಳನ್ನು ಟಂಕಿಸುವ ವಿಧಾನ ಪ್ರಗತಿಪರವಾಗಿರಲಿಲ್ಲ. ನಾಣ್ಯವನ್ನು ಟಂಕಿಸುವ ಏಕಸ್ವಾಮ್ಯತೆಯನ್ನು ಸರ್ಕಾರ ಹೊಂದಿರಲಿಲ್ಲ. ಖೋಟಾ ನಾಣ್ಯಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈ ಎಲ್ಲಾ ಕಾರಣಗಳಿಂದ ರಾಜ್ಯದಲ್ಲಿ ಕೆಲವು ಆರ್ಥಿಕ ಹಿನ್ನೆಡೆಯ ಪರಿಣಾಮಗಳು ಕಂಡುಬಂದವು. ಅಂದರೆ ಪ್ರತಿ ಮನೆಗಳು ಟಂಕಸಾಲೆಗಳಾಗಿ ಮಾರ್ಪಟ್ಟವು, ವಿದೇಶಿ ವ್ಯಾಪಾರ ಕುಂಠಿತವಾಯಿತು, ಚಿನ್ನ ಬೆಳ್ಳಿಯ ಅಭಾವ ತಲೆದೋರಿತು, ಹಣದುಬ್ಬರ ಉಂಟಾಯಿತು, ಜನರು ಖೋಟ ನಾಣ್ಯಗಳ ಮೂಲಕವೇ ತೆರಿಗೆಯನ್ನು ಕಟ್ಟಿ ಸರ್ಕಾರಕ್ಕೆ ವಂಚಿಸಿದರು, ವ್ಯಾಪಾರ ಮತ್ತು ಕೈಗಾರಿಕೆಗಳು ನಷ್ಟವನ್ನನುಭವಿಸಿದವು. ಈ ಮೇಲಿನ ಪರಿಣಾಮಗಳಿಂದ ತನ್ನ ತಪ್ಪಿನ ಅರಿವಾದ ಸುಲ್ತಾನ, ಜನರು ತಮ್ಮ ಬಳಿ ಇರುವ ತಾಮ್ರದ ನಾಣ್ಯಗಳನ್ನು ಸರ್ಕಾರಕ್ಕೆ ಹಿಂತಿರುಗಿಸಿ ಅವುಗಳ ಬದಲಿಗೆ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಪಡೆಯಲು ಆಜ್ಞಾಪಿಸಿದನು. ಇದರಿಂದ ರಾಜ್ಯದ ಖಜಾನೆ ತಾಮ್ರದ ನಾಣ್ಯಗಳಿಂದ ತುಂಬಿ ದಿವಾಳಿಯಾಯಿತು. ಈ ಮೂಲಕ ಸುಲ್ತಾನ ತನ್ನ ಜನರಿಂದಲೇ ಮೋಸ ಹೋದನು.

### 4.ಮಂಗೋಲರ ಬಗೆಗಿನ ನೀತಿ :

ಮಹಮ್ಮದ್-ಬಿನ್-ತುಘಲಕ್ ದೇವಗಿರಿಗೆ ತನ್ನ ರಾಜಧಾನಿಯನ್ನು ಬದಲಾಯಿಸಿದ ವಿಷಯ ತಿಳಿದ ಮಂಗೋಲರ 'ಚಗಟಾಯ್' ನಾಯಕ 'ತರ್ಮಾಷಿರಿನ್ ಖಾನ್' ಕ್ರಿ.ಶ. 1328ರಲ್ಲಿ ದೆಹಲಿಯ ಮೇಲೆ ದಾಳಿ ಮಾಡಿದ್ದನು. ಆದರೆ ಮಂಗೋಲರ ವಿರುದ್ಧ ಸೈನ್ಯದ ಕ್ರಮವನ್ನು ಕೈಗೊಳ್ಳದ ತುಘಲಕ್ ಅವರಿಗೆ ಅಪಾರ ಹಣನೀಡಿ ಕಳುಹಿಸುವ ನೀತಿ ಅನುಸರಿಸಿದ್ದು ಮಂಗೋಲರ ದಾಳಿಯ ಪುನರಾವರ್ತನೆಗೆ ಕಾರಣನಾದನು. ಇದರಿಂದ ರಾಜ್ಯ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಯಿತು.

### 5.ಮಧ್ಯ ಏಷ್ಯಾ ದಂಡಯಾತ್ರೆಯ ಯೋಜನೆ :

ಅಲ್ಲಾವುದ್ದೀನ್‌ನಂತೆಯೇ ಮಹಮ್ಮದ್-ಬಿನ್-ತುಘಲಕ್ ಪ್ರಪಂಚವನ್ನೇ ಗೆಲ್ಲುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದನು. ಇದಕ್ಕೆ 'ಖುರಾಸಾನಿ'ನ ಕುಲೀನರು ಸುಲ್ತಾನನ ಔದಾರ್ಯವನ್ನು ಗಳಿಸಲು ಪ್ರೇರೇಪಿಸಿದ್ದರು ಮತ್ತು ಖುರಾಸಾನ್‌ನ 'ಸುಲ್ತಾನ ಅಬುಸಯದ್'ನ ಅಸಮರ್ಥತೆಯನ್ನು ವ್ಯಕ್ತಪಡಿಸಿ ಯುದ್ಧಕ್ಕೆ ಪ್ರೇರೇಪಿಸಿದರು. ಮಹಮದ್-ಬಿನ್-ತುಘಲಕ್ 'ಇರಾಕ್ ಮತ್ತು ಖುರಾಸಾನ್'ಗಳನ್ನು ವಶಪಡಿಸಿಕೊಳ್ಳುವ ಮಹತ್ವಾಕಾಂಕ್ಷೆಯಿಂದ 3.70.000 ಸೈನಿಕರಿದ್ದ ಬೃಹತ್ ಸ್ಯನ್ಯವನ್ನು ಸಂಘಟಿಸಿದನು. ಸೈನಿಕರಿಗೆ ರಾಜ್ಯದ ಬೊಕ್ಕಸದಿಂದ ಒಂದು ವರ್ಷದ ವೇತನವನ್ನು ಮುಂಗಡವಾಗಿಯೇ ನೀಡಿದ್ದನು. ಕುದುರೆ ಮತ್ತು ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಅಪಾರ ವೆಚ್ಚ ಮಾಡಿದನು. ಆದರೆ ದಂಡೆಯಾತ್ರೆಯ ಸಮಯದಲ್ಲಿ ಎದುರಾಗಬಹುದಾದ ಭೌಗೋಳಿಕ ಸಮಸ್ಯೆ (ಹಿಂದೂಕುಷ್ ಕಣಿವೆ ಮತ್ತು ಹಿಮಾಲಯ ಪರ್ವತಗಳು) ಸಾರಿಗೆ ಸಂಪರ್ಕ ಆಹಾರದ ಕೊರತೆ ಮತ್ತು ರಾಜಕೀಯ ಏರಿಳಿತಗಳ ಯೋಜನೆಯಿಂದ ದಂಡಯಾತ್ರೆಯನ್ನು ರದ್ದುಗೊಳಿಸಿದನು.

### ವ್ಯಕ್ತಿತ್ವ :

ವಿ. ಎ. ಸ್ಮಿತ್ ಮಹಮದ್-ಬಿನ್-ತುಘಲಕ್‌ನ ವ್ಯಕ್ತಿತ್ವವನ್ನು ಕುರಿತಂತೆ 'ಆತ ಪರಸ್ಪರ ವಿರುದ್ಧ ಗುಣಗಳ ಆಶ್ಚರ್ಯಕರ ಸಮಾವೇಶ' ಎಂದಿದ್ದಾರೆ. ಡಾ|| ಈಶ್ವರಿ ಪ್ರಸಾದ್ : "ಮಧ್ಯಯುಗದಲ್ಲಿ ಕಿರೀಟ ಧರಿಸಿದವರೆಲ್ಲೆಲ್ಲಾ ನಿಸ್ಸಂದೇಹವಾಗಿ ಶ್ರೇಷ್ಠ, ದೆಹಲಿ ಸಿಂಹಾಸನವೇರಿದವರಲ್ಲಿ ಮಹಮ್ಮದನು ಅಸಾದಾರಣ ಮೇದಾವಿ". ಎಂದಿದ್ದಾರೆ. ಲೇನ್ ಪೋಲ್ : "ಆತನು ವ್ಯಕ್ತಪಡಿಸಿದ ವಿಚಾರಗಳು ಅವನ ಕಾಲದ ಜನತೆಯ ಕಲ್ಪನೆಗೆ ನಿಲುಕದಂತಹ ವಿಚಾರಗಳಾಗಿದ್ದವು". ಎಂದಿದ್ದಾರೆ. ಘನ ವಿದ್ವಾಂಸನಾದ; ಧಾರ್ಮಿಕ ಉದಾರಿಯಾದ ಮಹಮದ್-ಬಿನ್-ತುಘಲಕ್ ಮುಂಗೋಪಿಯಾಗಿದ್ದ. ಸಮತೂಕ ಪ್ರಜ್ಞೆ ಇಲ್ಲದೆ ಆಡಳಿತದಲ್ಲಿ ವಿಫಲನಾದನು.

**ಪ್ರೊ. ಜೀವಣಸಿದ್ದಪ್ಪ ಎಸ್.**

**ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ**

**ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ – ೫೭೭೫೦೧.**

**ಫೋನ್ ನಂ. 9916300848**

**ಇ-ಮೇಲ್: rshistory1456@gmail.com**

ಪ್ರೊ.ಜೀವಣಸಿದ್ದಪ್ಪ ಎಸ್. ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಸ.ಕ.ಕಾ.ಚಿತ್ರದುರ್ಗ